# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 57 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 04.12.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಮಾಹಿತಿಯ ಕೊರತೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಬಗ್ಗೆ ಅರಿವು ಮೂಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | ಬಂದಿದೆ.<br><br>ಈ ಬಗ್ಗೆ ಅರಿವು ಮೂಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ಜಾರಿಗೊಳಿಸುತ್ತಿರುವ ಋತು ಶುಚಿತ್ವ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ: ಮತ್ತು ಈ ಯೋಜನೆಯ ದ್ಯೇಯೋದ್ದೇಶಗಳೇನು: ಹಾಗೂ ಈ ಯೋಜನೆ ಅನುಷ್ಠಾನದಲ್ಲಿ ಕೇಂದ್ರ ರಾಜ್ಯ ಸರ್ಕಾರಗಳ ಜವಾಬ್ದಾರಿ ಮತ್ತು ಪಾತ್ರಗಳೇನು: ಹಾಗೂ ಕಳೆದ 5 ವರ್ಷಗಳಲ್ಲಿ ಕೇಂದ್ರದಿಂದ ಈ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ದೊರೆತಿರುವ ನೆರವು ಎಷ್ಟು; (ಪೂರ್ಣ ಮಾಹಿತಿ ನೀಡುವುದು) | 1. ರಾಜ್ಯ ಸರ್ಕಾರವು ಶುಚಿ ಕಾರ್ಯಕ್ರಮವನ್ನು 2013-14ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.<br><br>2. ಶುಚಿ ಕಾರ್ಯಕ್ರಮದ ಉದ್ದೇಶಗಳು:<br>• ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವ ಬಗ್ಗೆ ಅರಿವು ಮೂಡಿಸುವುದು.<br>• ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗದ ಬಗ್ಗೆ ತಿಳುವಳಿಕೆ ನೀಡುವುದು.<br>• ಸಮುದಾಯ ಮತ್ತು ವಿಶೇಷವಾಗಿ ಹದಿಹರೆಯದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸುವುದು.<br>• ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸುವುದು ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡುವುದು.<br><br>3. ಕೇಂದ್ರ ಸರ್ಕಾರದ ಎನ್.ಹೆಚ್.ಎಂ ರಡಿ Rashtriya Kishora Swasthya Karyakrama (RKSK) Menstrual Hygiene Scheme ಕಾರ್ಯಕ್ರಮ ನಡೆಸಲಾಗುತ್ತಿದ್ದು, ಇದರಡಿ ಹದಿಹರೆಯದ ಹೆಣ್ಣುಮಕ್ಕಳಿಗೆ (ಫಲಾನುಭವಿಗಳಿಗೆ) ಕಡಿಮೆ ಬೆಲೆಯಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತದೆ.<br><br>ಆದರೆ ರಾಜ್ಯ ಸರ್ಕಾರದ ಶುಚಿ-ಯೋಜನೆಯಡಿ ಸಂಪೂರ್ಣ ಉಚಿತ ಸರಬರಾಜು ಮಾಡುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ಅನುಷ್ಠಾನ ಭಾಗಿತ್ವ ಅಳವಡಿಸಿಕೊಂಡಿರುವುದಿಲ್ಲ. 2023-24ನೇ ಸಾಲಿಗೆ ಕಾರ್ಯಕ್ರಮದಡಿ ಸರ್ಕಾರದ ವತಿಯಿಂದ ರೂ.4050.00 ಲಕ್ಷಗಳ ಅನುದಾನದಡಿಯಲ್ಲಿ ಸುಮಾರು 19,29,355 ಹದಿಹರೆಯದ ಹೆಣ್ಣು ಮಕ್ಕಳಿಗೆ(ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲಾ/ಕಾಲೇಜು) ಉಚಿತವಾಗಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |


| | | |
|---|---|---|
| | | 4. ಆರ್ಥಿಕ ವರ್ಷ 2022-23ನೇ ಸಾಲಿಗೆ ರೂ.20.10 ಲಕ್ಷಗಳನ್ನು Menstrual Hygiene Schemeರ ಕುರಿತಾದ ಅಧ್ಯಯನ ನಡೆಸಲು NHM-Rashtriya Kishora Swasthya Karyakrama (RKSK) ಕಾರ್ಯಕ್ರಮದಡಿ ಅನುದಾನ ಒದಗಿಸಲಾಗಿದೆ.<br><br>ಕಳೆದ 5 ವರ್ಷಗಳಲ್ಲಿನ ಕೇಂದ್ರ ಸರ್ಕಾರವು ನೀಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.<br><br>ಕ್ರ. ಸಂ / ಆರ್ಥಿಕ ವರ್ಷ / ಕೇಂದ್ರ ಸರ್ಕಾರದ ನೆರವು (ರೂ.ಲಕ್ಷಗಳಲ್ಲಿ)<br>1 / 2019-20 / 0<br>2 / 2020-21 / 0<br>3 / 2021-22 / 0<br>4 / 2022-23 / 20.10<br>5 / 2023-24 / 0 |
| ಇ) | ರಾಜ್ಯದಲ್ಲಿ ಋತು ಶುಚಿತ್ವ ಯೋಜನೆಗೆ ಕಳೆದ 3 ವರ್ಷಗಳಿಂದ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಯಾಗದೇ ಗ್ರಾಮೀಣ ಭಾಗದ ಹದಿಹರೆಯದ ಯುವತಿ ಮತ್ತು ಮಹಿಳೆಯರು ತಮ್ಮ ಶುಚಿತ್ವ ಕಾಪಾಡಿಕೊಳ್ಳಲು ಬಟ್ಟೆಯನ್ನು ಉಪಯೋಗಿಸುತ್ತಿದ್ದು, ಇದರಿಂದ ಚರ್ಮರೋಗ, ಮೂತ್ರರೋಗ ಮತ್ತಿತರೆ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | • ಗ್ರಾಮೀಣ ಭಾಗದ ಹದಿಹರೆಯದ ಯುವತಿಯರು ತಮ್ಮ ತಮ್ಮ ಶುಚಿತ್ವ ಕಾಪಾಡಿಕೊಳ್ಳಲು ಬಟ್ಟೆಯನ್ನು ಉಪಯೋಗಿಸುತ್ತಿದ್ದು, ಇದರಿಂದ ಚರ್ಮರೋಗ ಮೂತ್ರರೋಗ ಮತ್ತಿತರ ಆರೋಗ್ಯ ಸಮಸ್ಯೆಗಳು ಉಂಟಾಗಿರುವ ಕುರಿತಾಗಿ ಆರೋಗ್ಯ ಕೇಂದ್ರಗಳಲ್ಲಿ (ಆಸ್ಪತ್ರೆಗಳಲ್ಲಿ) ವರದಿಯಾಗಿರುವುದಿಲ್ಲ. |
| ಈ) | ರಾಜ್ಯದಲ್ಲಿ ಹದಿಹರೆಯದ ಹೆಣ್ಣು ಮಕ್ಕಳು ಹಾಗೂ ಮಹಿಳಾ ಶಿಕ್ಷಕರು ಮತ್ತು ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರು ಋತುಚಕ್ರ ಸಮಯದಲ್ಲಿ ಕ್ರಮವಾಗಿ ಶಾಲಾ-ಕಾಲೇಜು ಮತ್ತು ಸರ್ಕಾರಿ ಕಚೇರಿಗಳಿಗೆ ಗೈರು ಹಾಜರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಈ ಬಗ್ಗೆ ಸರ್ಕಾರ ಅಧ್ಯಯನ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಪೂರ್ಣ ವಿವರಗಳನ್ನು ನೀಡುವುದು? | • ಬಂದಿರುವುದಿಲ್ಲ.<br><br>• 2023-24ನೇ ಸಾಲಿಗೆ "Understanding Menstrual Hygiene Management in Rural and Urban region of Karnataka" A study under NHM-RKSK ವೆಂಬ ಅಧ್ಯಯನವನ್ನು ಹದಿಹರೆಯದವರಿಗೆ ಕೇಂದ್ರೀಕರಿಸಿ ನಡೆಸಲಾಗುತ್ತಿದ್ದು, ಮಾರ್ಚ್-2024 ರೊಳಗಾಗಿ ಪೂರ್ಣಗೊಳಿಸಲಾಗುವುದು. ಸರ್ಕಾರದ ವತಿಯಿಂದ ಹದಿಹರೆಯದ ಹೆಣ್ಣುಮಕ್ಕಳ ಮುಟ್ಟಿನ ನೈರ್ಮಲ್ಯದ ವೈಜ್ಞಾನಿಕ ನಿರ್ವಹಣೆ ಹಾಗೂ ಆರೋಗ್ಯದ ಕುರಿತು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಆಕುಕ 64 ಎಸ್.ಟಿ.ಕ್ಯೂ 2023**


**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.


ಅನುಬಂಧ-.

1. ಬಳಕೆಯಾದ ನಂತರ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಕಾಗದದಲ್ಲಿ ಸುತ್ತಿ ಸಾಮಾನ್ಯ ಒಣ ತ್ಯಾಜ್ಯದ ಮುಖಾಂತರ ಅಥವಾ
2. ನೆಲದಲ್ಲಿ ಹೂಳುವ ಮುಖಾಂತರ ಸುರಕ್ಷಿತವಾಗಿ ವಿಲೇವಾರಿ ಮಾಡುವುದು.
3. ಸದರಿ ವಿಲೇವಾರಿಯ ಕುರಿತಂತೆ ಮಕ್ಕಳಲ್ಲಿ ಮಾಹಿತಿ ಹಾಗೂ ಜಾಗೃತಿ ಮೂಡಿಸಲು ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.
   a) ವಿತರಿಸಲಾಗುತ್ತಿರುವ ಶುಚಿ ಪ್ಯಾಡ್‌ನ ಪೊಟ್ಟಣದ ಮೇಲೆ ವಿಲೇವಾರಿಯ ಕುರಿತು ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ಚಿತ್ರದೊಂದಿಗೆ ತಿಳಿಸಲಾಗಿದೆ.





   b) ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿ ಶುಚಿ ಕಾರ್ಯಕ್ರಮದ ಬಿತ್ತಿಪತ್ರ (ಐ.ಇ.ಸಿ ಪೋಸ್ಟರ್) ಅನ್ನು ವಿನ್ಯಾಸಗೊಳಿಸಲಾಗಿ ಹಾಗೂ ಜಿಲ್ಲಾವಾರು ಶಾಲಾ-ಕಾಲೇಜು, ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮುಖಾಂತರ Digital Wall Paining ಮಾಡಿಸಲಾಗಿ ಮಕ್ಕಳಿಗೆ ಶುಚಿ ಕಾರ್ಯಕ್ರಮ ಕುರಿತ ಕಿರು ಮಾಹಿತಿ ಹಾಗೂ ಬಳಸಿದ ಪ್ಯಾಡ್‌ನ ಸೂಕ್ತ ವಿಲೇವಾರಿ ಕುರಿತು ಸ್ಪಷ್ಟ ಮಾಹಿತಿಯನ್ನು ಚಿತ್ರದೊಂದಿಗೆ ತಿಳಿಸಲಾಗಿದೆ (ಪ್ರತಿ ಲಗತ್ತಿಸಿದೆ).





c) ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿ ಆಪ್ತ ಸಮಾಲೋಚಕರುಗಳು ಸ್ನೇಹಾ ಕ್ಲಿನಿಕ್ ಗಳಿಗೆ ಭೇಟಿ ನೀಡುವ ಎಲ್ಲಾ ಹದಿಹರೆಯದ ಮಕ್ಕಳಿಗೆ ಋತುಚಕ್ರ, ಮುಟ್ಟಿನ ವೈಜ್ಞಾನಿಕ ನಿರ್ವಹಣೆ ಹಾಗೂ ಭಾರತ ಸರ್ಕಾರದ "ಹದಿಹರೆಯದವರ ಆರೋಗ್ಯ ದಿನಾಚರಣೆ" ಕಾರ್ಯಕ್ರಮಗಳಲ್ಲಿ ಶುಚಿ ಕಾರ್ಯಕ್ರಮದ ಮಾಹಿತಿ ಹಾಗೂ ಸಮುದಾಯದಲ್ಲಿ ಅರಿವು ಮತ್ತು ಜಾಗೃತಿಯನ್ನು ಮೂಡಿಸಲಾಗುತ್ತಿದೆ.



d) ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಆರ್.ಬಿ.ಎಸ್.ಕೆ ಮೊಬೈಲ್ ಹೆಲ್ತ್ (ವೈದ್ಯರ) ತಂಡಗಳು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಆರೋಗ್ಯ ತಪಾಸಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಆರೋಗ್ಯ ಅಧಿವೇಶನ ಚಟುವಟಿಕೆಯನ್ವಯ ಶುಚಿ ಕಾರ್ಯಕ್ರಮ ಹಾಗೂ ಬಳಸಿದ ಪ್ಯಾಡ್‌ನ ಸೂಕ್ತ ವಿಲೇವಾರಿ ಕುರಿತು ಸ್ಪಷ್ಟ ಜ್ಞಾನ ಹಾಗೂ ಜಾಗೃತಿಯನ್ನು ಮೂಡಿಸುವ ಮುಖಾಂತರ ಪ್ರೋತ್ಸಾಹಿಸುತ್ತಾರೆ.

e) ಭಾರತ ಸರ್ಕಾರದ ಮಹತ್ತರ ಕಾರ್ಯಕ್ರಮವಾದ ಆರೋಗ್ಯ ಮತ್ತು ಕ್ಷೇಮ ಕಾರ್ಯಕ್ರಮದೊಂದಿಗೆ ಸಮನ್ವಯ ಹೊಂದಲಾಗಿ, ಈ ಕಾರ್ಯಕ್ರಮದಡಿ ಕಾರ್ಯಗತವಾಗಿರುವ ರಾಜ್ಯಾದ್ಯಂತ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಸ್ನೇಹಾ ಕ್ಲಿನಿಕ್‌ಗಳ ಸೇವೆಗಳನ್ನು ಲಭ್ಯಗೊಳಿಸುವುದರೊಂದಿಗೆ ಶುಚಿ ಕಾರ್ಯಕ್ರಮದ ಮಾಹಿತಿ ಹಾಗೂ ಬಳಸಿದ ಪ್ಯಾಡ್‌ನ ಸೂಕ್ತ ವಿಲೇವಾರಿ ಕುರಿತು ಸ್ಪಷ್ಟ ಮಾಹಿತಿಯನ್ನು ಸಮುದಾಯದಲ್ಲಿ ವಿಶೇಷವಾಗಿ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಜಾಗೃತಿ ಮೂಡಿಸುವಲ್ಲಿ "ಹದಿಹರೆಯದ ಆರೋಗ್ಯ ದಿನಾಚರಣೆ" ಗಳನ್ನು ಆಚರಿಸುವ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಉಪ ನಿರ್ದೇಶಕರು
(ಆರ್.ಬಿ.ಎಸ್.ಕೆ., ಆರ್.ಕೆ.ಎಸ್.ಕೆ. ಮತ್ತು ಶುಚಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, 6ನೇ ಮಹಡಿ, ಪೂರ್ವ ವಲಯ
ಮಾಗಡಿ ರಸ್ತೆ, ಬೆಂಗಳೂರು-23